ಸಿ.ಸಿ.ನಂ. 120/2021

ಪಿಡಬ್ಲ್ಯೂಃ 10

ಸಿ.ಡಬ್ಲ್ಯೂಃ 22

## ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಾರವಾರ

**ಸಿ.ಸಿ.ನಂ. 120/2021**

| | | |
|---|---|---|
| ಸಾಕ್ಷಿದಾರರ ಹೆಸರು | : | ಕುಸುಮಾಧರ ಕೆ. |
| ತಂದೆಯ ಹೆಸರು | : | ರಾಮಯ್ಯ ಕೆ. |
| ವಯಸ್ಸು | : | **41** ವರ್ಷ |
| ಉದ್ಯೋಗ | : | ಪಿ.ಐ. ಮುಲ್ಕಿ ಪೊಲೀಸ್ ಠಾಣೆ , ಮಂಗಳೂರು |
| ವಾಸ್ತವ್ಯ | : | ಮಂಗಳೂರು |

ಸತ್ಯ ಪ್ರತಿಜ್ಞೆಯ ಮೇರೆಗೆಃ **07-09-2022**

## ದಂಡ ಪ್ರಕ್ರಿಯೇ ಸಂಹಿತೆ ಕಲಂ. 299 ರಡಿ ಸಾಕ್ಷಿಯ ಹೇಳಿಕೆಃ

**ಮುಖ್ಯ ವಿಚಾರಣೆಃ ಮಾನ್ಯ ಹಿರಿಯ ಸ ಸ ಅ ರವರಿಂದಃ**

ನಾನು 31-07-2015 ರಿಂದ 02-08-2017 ತನಕ ಕಾರವಾರ ನಗರ ಪೋಲಿಸ್ ಠಾಣೆಯಲ್ಲಿ ಪಿ.ಎಸ್.ಐ. ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 25-01-2017 ರಂದು 8 ನೇ ಆರೋಪಿಯ ಸ್ವಖುಷಿ ಹೇಳಿಕೆಯನ್ನು ಪಡೆದುಕೊಂಡು ಅದರಂತೆ ಅದೇ ದಿನ 8 ನೇ ಆರೋಪಿಯ ಮನೆಗೆ ಹೋಗಿ 8 ನೇ ಆರೋಪಿ ಕೊಟ್ಟ ಬಂಗಾರದ ಒಡವೆಗಳಾದ ಬಂಗಾರದ ನಮೂನೆಯ ಲಕ್ಷ್ಮಿ ಚಿತ್ರ ಇರುವ ಸಣ್ಣ ಲಾಕೇಟ್, ಚಿನ್ನದ ತಂತಿ ಹಾಗೂ ಸಣ್ಣ ದೊಡ್ಡ ಸೈಜಿನ ಮಣಿಗಳಿರುವ ಪ್ಲಾಸ್ಟೀಕ್ ಪ್ಯಾಕೇಟ್ ಒಂದು, ಬಂಗಾರದ ನಮೂನೆಯ ಸಣ್ಣ ಗಟ್ಟಿ ಒಂದು ಹಾಗೂ ಇತರೇ ಬಂಗಾರದ ಒಡವೆಗಳು ತುಂಡು ಇರುವ ಪ್ಲಾಸ್ಟೀಕ್ ಪ್ಯಾಕೇಟ್ ಒಂದು, ಬಂಗಾರದ ನಮೂನೆಯ ಸಣ್ಣ ಮಣಿಗಳು ಹಾಗೂ ಸಣ್ಣ ತಂತಿಗಳಿರುವ ಪ್ಲಾಸ್ಟೀಕ್ ಪ್ಯಾಕೇಟ್ ನ್ನು ಹಾಜರುಪಡಿಸಿದ್ದರು ಎಂದರೆ ಸರಿಯಲ್ಲ. ಅದೇ ದಿನ ಬಂಗಾರದ ನಮೂನೆಯ ಲಕ್ಷ್ಮಿಯ ಚಿತ್ರದ ಸಣ್ಣ ಲಾಕೇಟ್ ಹಾಗೂ ಮಣಿಗಳು, ಸಣ್ಣ ಮಣಿಗಳ ಅರ್ಧ ಭಾಗ ಗಳು ಇರುವ ಪ್ಲಾಸ್ಟೀಕ್ ಪ್ಯಾಕೇಟ್, ತೆಂಗಿನ ಮರದ ಚಿತ್ರ ಇರುವ ಬಂಗಾರದ ನಮೂನೆಯ ಗಟಿ ಹಾಗೂ ಸಣ್ಣ ಗಟ್ಟಿ ಇರುವ ಪ್ಲಾಸ್ಟಿಕ್ ಪ್ಯಾಕೇಟ್, ಬಂಗಾರದ

ಸಿ.ಸಿ.ನಂ. 120/2021
ಪಿಡಬ್ಲ್ಯೂ: 10
ಸಿ.ಡಬ್ಲ್ಯೂ: 22

ನಮೂನೆಯ ಕಡ್ಡಿ ಇರುವ ಪ್ಲಾಸ್ಟೀಕ್ ಪ್ಯಾಕೇಟ್ ಒಂದು, ಕೊಂಡಿ ನಮೂನೆಯ ಬಂಗಾರದ ನಮೂನೆ ತುಣುಕುಗಳಿರುವ ಪ್ಲಾಸ್ಟೀಕ್ ಪ್ಯಾಕೇಟ್ ಒಂದು, ಬಂಗಾರದ ನಮೂನೆಯ ತಂತಿ ಹಾಗೂ ತುಂಡುಗಳಿರುವ ಪ್ಲಾಸ್ಟ್ಟಿಕ್ ಪ್ಯಾಕೇಟ್ ಒಂದು, ಕರಿ ಮಣಿ ಹಾಗೂ ಬಂಗಾರದ ನಮೂನೆಯ ಮಣಿ ಪೋಣಿಸಿದ ನಾಲ್ಕು ಎಳೆಯ ತುಂಡಾದ ಸರ ಹಾಗೂ ಸಣ್ಣ ತುಂಡುಗಳು ಮತ್ತು ಬಂಗಾರದ ನಮೂನೆಯ ಮಣಿಗಳು ಹಾಗೂ ಕೊಂಡಿ ನಮೂನೆಯ ಬಂಗಾರದ ನಮೂನೆಯ ತುಣುಕುಗಳಿರುವ ಪ್ಲಾಸ್ಟೀಕ್ ಪ್ಯಾಕೇಟ್ ಒಂದು, ಬಂಗಾರದ ನಮೂನೆಯ ಇಂಗ್ಲಿಷ ಅಕ್ಷರಗಳು ಹಾಗೂ ಅವುಗಳ ತುಂಡುಗಳು ಇರುವ ಪ್ಲಾಸ್ಟೀಕ್ ಪ್ಯಾಕೇಟ್ ಒಂದು, ಬಂಗಾರದ ನಮೂನೆಯ ಸಣ್ಣ ಮಣಿಗಳಿರುವ ಪ್ಲಾಸ್ಟೀಕ್ ಪ್ಯಾಕೇಟ್ ಒಂದು , 2000 ಮುಖ ಬೆಲೆಯ ನೋಟುಗಳು 19,500 ಮುಖಬೆಲೆಯ 3 ನೋಟುಗಳು, 100 ರೂ. ಮುಖ ಬಲೆಯ ನಾಲ್ಕು ನೋಟುಗಳು ಹೀಗೆ 39,900/- ವಶಪಡಿಸಿಕೊಂಡು ಪಂಚನಾಮೆಯನ್ನು ಮಾಡಿರುತ್ತೇನೆ ಹಾಗೂ ವಶಪಡಿಸಿಕೊಂಡ ಸ್ವತ್ತುಗಳು ಕಾರವಾರ ಶಹ ಠಾಣಾ ಗುನ್ನಾ ನಂ. 8/2017 ರಲ್ಲಿ ತನಿಖಾಧಿಕಾರಿ ಮುಂದೆ ಹಾಜರುಪಡಿಸಿ ಮತ್ತು 8 ನೇ ಆರೋಪಿಯ ಸ್ವಮುಷಿ ಹೇಳಿಕೆಯನ್ನು ಹಾಜರುಪಡಿಸಿರುತ್ತೇನೆ. ಕಾರವಾರ ಶಹರ ಪೋಲೀಸ್ ಠಾಣಾ ಗುನ್ನಾ ನಂ. 1/2017 ರಲ್ಲಿ ದಿ: 17-03-2017 ರಂದು ಕಾನೂನು ಸಂಘರ್ಷಕ್ಕೊಳಗಾದ ಬಾಲಕ ವಿಷ್ಣು ಪೂಜಾರಿ ಇತನ ಸ್ವಮುಷಿ ಹೇಳಿಕೆಯನ್ನು ಪಡೆದುಕೊಂಡು ಹಾಜರುಪಡಿಸಿರುತ್ತೇನೆ. ದಾಖಲಾತಿಗಳು ಜೆರಾಕ್ಸ ಪ್ರತಿಗಳಾಗಿದ್ದರಿಂದ ನಿಷಾನೆಗಳಾಗಿ ಗುರುತಿಸಿಲ್ಲ.

**ಮರು ವಿಚಾರಣೆ: ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ
Sd/-
ಮುಖ್ಯ ನಾಯಿಕ ದಂಡಾಧಿಕಾರಿಗಳು,
ಕಾರವಾರ